# ತಿ. ನರಸೀಪುರದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

**ಸಿಸಿ ಸಂಖ್ಯೆ 135/2016**

CW-3/PW-1

| | | |
|---|---|---|
| ಹೆಸರು | : | ಖಲೀಲುಲ್ಲಾ |
| ತಂದೆ/ಗಂಡನ ಹೆಸರು | : | ಬಶೀರ್ ಅಹಮ್ಮದ್ |
| ವಯಸ್ಸು | : | 45 ವರ್ಷ |
| ವೃತ್ತಿ | : | ಚಾಲಕ |
| ವಾಸ ಸ್ಥಳ | : | ಗರ್ಗೇಶ್ವರಿ, ತಿ. ನರಸೀಪುರ ತಾಲೂಕು |
| ದಿನಾಂಕ | : | **26-03-2021** |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು ಆರೋಪಿತರು ಗೊತ್ತು. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಮತ್ತು ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ. ಆದರೆ ಒಂದು ಪಂಚನಾಮೆಗೆ ನನ್ನ ಸಹಿಯನ್ನು ಮಾತ್ರ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ಈಗ ನಿ.ಪಿ.1 ಎಂದು ಗುರುತಿಸಿ ಅದರಲ್ಲಿರುವ ನನ್ನ ಸಹಿಯನ್ನು ಈಗ ನಿ.ಪಿ.1(ಎ) ಎಂದು ಗುರುತಿಸಲಾಯಿತು. ದಾಖಲೆಯಲ್ಲಿ ಬರೆದ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ. ಅದೇ ರೀತಿ ನನ್ನ ಸಮಕ್ಷಮ ನಿ.ಪಿ.1 ಕ್ಕೆ ಬೇರೆ ಯಾರು ಕೂಡ ಸಹಿ ಮಾಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದು ಹೇಳಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರವರು ಅನುಮತಿಯನ್ನು ಕೇಳಿರುತ್ತಾರೆ. ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ಮತ್ತು ಆರೋಪಿತರ ಮದುವೆಯ ಮಾತುಕತೆಯ ಸಮಯದಲ್ಲಿ ಹುಡುಗನಿಗೆ ಒಂದದು ಚಿನ್ನದ ಚೈನ್, ಚಿನ್ನದ ಉಂಗುರ ಮತ್ತು ಗೃಹೋಪಯೋಗಿ ವಸ್ತುಗಳನ್ನು ಕೊಟ್ಟು ಬೆಂಗಳೂರಿನಲ್ಲಿ ಮದುವೆ ಮಾಡಿಕೊಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮದುವೆಗೆ ನಾನೂ ಕೂಡ ಹೋಗಿದ್ದೆನು ಎಂದರೆ ಸರಿಯಲ್ಲ. ಮದುವೆಯಾದ ನಂತರ ಚಾಸಾ-1ರವರು ಆರೋಪಿತರ

ಗರ್ಗೇಶ್ವರಿ ಮನೆಯಲ್ಲಿ ವಾಸವಾಗಿದ್ದರು ಎಂದರೆ ನಿಜ. ಆರು ತಿಂಗಳ ಕಾಲ ಆರೋಪಿತರು ಚಾಸಾ-1ರವರನ್ನು ಚನ್ನಾಗಿ ನೋಡಿಕೊಂಡು ಆನಂತರ ತಾನು ಲಾರಿ ಖರೀದಿಸಬೇಕು, ನಿಮ್ಮ ತಂದೆಯಿಂದ ಇನ್ನೂ ಹೆಚ್ಚಿನ ವರದಕ್ಷಿಣೆ ಪಡೆದುಕೊಂಡು ಬಾ ಎಂದು ಚಾಸಾ-1ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ಹಿಂಸೆ ತಾಳಲಾರದೇ ಚಾಸಾ-1ರವರು ತನ್ನ ತಂದೆಯಿಂದ ಹಲವು ಬಾರಿ ಹಣ ತಂದುಕೊಟ್ಟ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿನಾಂಕ 24/05/2015ರಂದು ವರದಕ್ಷಿಣೆ ತರುವಂತೆ ಆರೋಪಿತರು ಚಾಸಾ-1ರವರಿಗೆ ಮತ್ತೆ ಕಿರುಕುಳ ನೀಡಿ ಹೊಡೆದು ಗಲಾಟೆ ಮಾಡಿದ್ದರಿಂದ ಚಾಸಾ-1ರವರು ತಿ. ನರಸೀಪುರ ಪೊಲೀಸರಿಗೆ ದೂರು ನೀಡಿದರು ಎಂದು ನನಗೆ ಗೊತ್ತಿಲ್ಲ. ಆನಂತರ ಆರೋಪಿತರು ಇನ್ನೊಮ್ಮೆ ಈ ರೀತಿಯಾಗಿ ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ.

ದಿನಾಂಕ 28/09/2015ರಂದು ಸಂಜೆ 5 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ಆರೋಪಿತರ ಮನೆಯಲ್ಲಿ ಗಲಾಟೆ ಶಬ್ದ ಕೇಳಿ ಅಲ್ಲಿಗೆ ಹೋದೆನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-1 ರವರ ತಂದೆ ತಾಯಿ ಹಾಗೂ ಸಂಬಂಧಿಕರು ಆರೋಪಿತರ ಮನೆಗೆ ಬಂದಿದ್ದರುಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಆರೋಪಿತರ ಸಂಬಂಧಿಕರೂ ಕೂಡ ಹಾಜರಿದ್ದರುಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತನು ಚಾಸಾ-1ರವರನ್ನು ಕುರಿತು ನಾನು ನಿನಗೆ ತಲಾಖ್ ನೀಡುತ್ತೇನೆ ಎಂದು ಹೇಳಿ ಆಕೆಯನ್ನು ಮನೆಯಿಂದ ಎಳೆದುಕೊಂಡು ಹೊರಗೆ ದಬ್ಬಿದನು ಎಂದರೆ ಸರಿಯಲ್ಲ. ಆ ಸಮಯದಲ್ಲಿ 2ನೇ ಆರೋಪಿತಳು ಚಾಸಾ-1ರವರ ಮೇಲೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆಗ ನಾನು ಮತ್ತು ಇತರರು ಜಗಳ ಬಿಡಿಸಿ ಸಮಾಧಾನ ಪಡಿಸಿದೆವು ಎಂದರೆ ಸರಿಯಲ್ಲ. ಆಗಲೂ ಕೂಡ 1ನೇ ಆರೋಪಿತನು ತನ್ನ ಮಾವನಿಗೆ ಬೋಳಿಮಕ್ಕಳೇ ನಿಮ್ಮನ್ನು ಇಲ್ಲಿಗೆ ಕರೆಸಿಕೊಂಡಿದ್ದು ಎಂದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಆಗ ಚಾಸಾ-1ರವರು ತಿ. ನರಸೀಪುರ ಪೊಲೀಸರಿಗೆ ದೂರವಾಣಿ ಮೂಲಕ ಗಲಾಟೆ ವಿಚಾರವನ್ನು ತಿಳಿಸಿದಾಗ ಪೊಲೀಸರು ಸ್ಥಳಕ್ಕೆ ಬಂದು ಸಮಾಧಾನಪಡಿಸಿದರು ಎಂದರೆ ಸರಿಯಲ್ಲ. ಇದಾದ ನಂತರ ಚಾಸಾ-1ರವರು ಠಾಣೆಗೆ ಹಾಜರಾಗಿ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-1ರವರು ದೂರು ನೀಡಿದ ನಂತರ ದಿನಾಂಕ 01/10/2015ರಂದು ಸಂಜೆ 5 ರಿಂದ 5.45 ಗಂಟೆಯವರೆಗೆ ಪೊಲೀಸರು ಸ್ಥಳಕ್ಕೆ ಬಂದಾಗ ಚಾಸಾ-1ರವರು ತೋರಿಸಿದ ಸ್ಥಳವನ್ನು ನನ್ನ ಮತ್ತು ಇತರರ ಸಮಕ್ಷಮ ಪರಿಶೀಲನೆ ಮಾಡಿ ನಿ.ಪಿ.1ರಂತೆ ಪಂಚನಾಮೆ ಬರೆದು ಓದಿ ಹೇಳಿ ನಮ್ಮೆಲ್ಲರ ಸಹಿ ಪಡೆದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಸಮಯದಲ್ಲಿ ಪೊಲೀಸರು ಮದುವೆಯ ಒಂದು ಫೋಟೋ ಹಾಗೂ ಮದುವೆಯ ಸರ್ಟಿಫಿಕೇಟಿನ ಜೆರಾಕ್ಸ್ ಪ್ರತಿಯನ್ನು ಪಡೆದರು ಎಂದರೆ ಸರಿಯಲ್ಲ.

ಮೇಲೆ ಹೇಳಿದ ಘಟನೆ ಮತ್ತು ಪಂಚನಾಮೆಯ ವಿಚಾರವಾಗಿ ನಾನು ದಿನಾಂಕ 01/10/2015 ರಲ್ಲಿ ಈಗ ಓದಿ ಹೇಳಿದಂತೆ "ಮದುವೆ ಮಾತುಕತೆಯು ............... ಮಹಜರಿಗೆ ನಾನು ರುಜು ಮಾಡಿರುತ್ತೇನೆ" ಎಂದು ನಿ.ಪಿ.2 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಘಟನೆಯ ವಿಚಾರ ಮತ್ತು ನಿ.ಪಿ.1 ಮತ್ತು 2 ರಲ್ಲಿರುವ ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ನನಗೇನೂ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಪಾಟೀ ಸವಾಲು ಏನೂ ಇಲ್ಲವೆಂದು ಹೇಳಿರುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ತಿ. ನರಸೀಪುರ.